# ಕರ್ನಾಟಕ ಲೋಕಾಯುಕ್ತ

**ಕಂಪ್ಲೆಂಟ್/ಉಪಲೋಕ್/ಜಿಎಲ್‌ಬಿ/3492/2021**
**ಪಿಓ.ಎ.ಆರ್.ಇ–05**

ಬಹುಮಹಡಿಗಳ ಕಟ್ಟಡ,
ಡಾ: ಬಿ.ಆರ್. ಅಂಬೇಡ್ಕರ ವೀಧಿ,
ಬೆಂಗಳೂರು_ದಿನಾಂಕ :16/05/2022
17 [illegible]

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(3)ರ ಅನ್ವಯ ವರದಿ

**ವಿಷಯ: ಶ್ರೀ. ವಸಂತಕುಮಾರ್ ಬಿನ್ ದತ್ತಾತ್ರೇಯರಾವ್ ಅವರಾದಿ, ಜಿಲ್ಲಾ ವ್ಯವಸ್ಥಾಪಕರು, ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ, ಯಾದಗಿರಿ.**

ಆದ ನೀವು ಸರ್ಕಾರಿ ಕರ್ತವ್ಯ ನಿರ್ವಹಿಸುವ ಕಾಲಕ್ಕೆ ದುರ್ನಡತೆ ತೋರಿದ ಕುರಿತಂತೆ ನಿಮ್ಮ ಮೇಲೆ ಶಿಸ್ತುಕ್ರಮ ಜರುಗಿಸುವ ಬಗ್ಗೆ.

******

1. ಆರಕ್ಷಕ ನಿರೀಕ್ಷಕರು ಭ್ರಷ್ಟಾಚಾರ ನಿಗ್ರಹ ದಳ ಪೋಲಿಸ್ ಠಾಣೆ, ಯಾದಗಿರಿ (ಇನ್ನು ಮುಂದೆ ತನಿಖಾಧಿಕಾರಿ ಎಂದು ಕರೆಯಲ್ಪಡುತ್ತಾರೆ) ಇವರು ಸಲ್ಲಿಸಿದ ತನಿಖಾ ವರದಿ ಮತ್ತು ದಾಖಲೆಗಳನ್ನು ಪರಿಶೀಲಿಸಲಾಗಿ **ಶ್ರೀ. ವಸಂತಕುಮಾರ್ ಬಿನ್ ದತ್ತಾತ್ರೇಯರಾವ್ ಅವರಾದಿ, ಜಿಲ್ಲಾ ವ್ಯವಸ್ಥಾಪಕರು, ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ, ಯಾದಗಿರಿ.** (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ಇವರ ವಿರುದ್ಧ **ಶ್ರೀ ಲಕ್ಷ್ಮಣ ಬಿನ್ ಬಸಪ್ಪ ಕಟ್ಟಿಮನಿ, ಸಾ॥ ದೇವರಗೋನಾಳ, ತಾ॥ ಸುರಪುರ ಜಿ॥ ಯಾದಗಿರಿ** (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ಇವರು ದೂರು ಸಲ್ಲಿಸಿದ್ದು, ಸದರಿ ದೂರಿನಲ್ಲಿ ಬರೆದುಕೊಂಡ ಅಂಶವೇನೆಂದರೆ, ಮಹಿಳಾ ಸಮೃದ್ಧಿ ಯೋಜನೆ ಅಡಿ 120 ಮಹಿಳಾ ಫಲಾನುಭವಿಗಳಿಗೆ ಪ್ರತಿಯೊಬ್ಬರಿಗೆ ರೂ. 25,000/– ಸಾಲ ಮಂಜೂರಾಗಿದ್ದು, ಈಗಾಗಲೇ 93 ಫಲಾನುಭವಿಗಳ ಸಾಲದ ಹಣ ಬಿಡುಗಡೆಯಾಗಿದ್ದು, 27 ಜನ ಫಲಾನುಭವಿಗಳಿಗೆ ಸಾಲ ಬಿಡುಗಡೆ ಮಾಡುವುದು ಬಾಕಿಯಿದ್ದು, ದೂರುದಾರರ ಜಾತಿಯವರಾದ ಅಯ್ಯಮ್ಮ, ರೇಣುಕಾ, ಬಸಮ್ಮ ಹಾಗೂ ಜ್ಯೋತಿ ಇವರುಗಳು ದೂರುದಾರರಿಗೆ ಸಾಲ ಬಿಡುಗಡೆ ಮಾಡಿಸಿಕೊಡಲು ವಿನಂತಿಸಿದ್ದರ ಮೇರೆಗೆ, ದೂರುದಾರರು ಎದುರುದಾರರನ್ನು ಭೇಟಿ ಮಾಡಿ, ಸಾಲ ಬಿಡುಗಡೆಗೆ ವಿನಂತಿಸಲಾಗಿ, ಎದುರುದಾರರು ಪ್ರತಿಯೊಬ್ಬರಿಗೆ ರೂ. 5,000/– ದಂತೆ ಮೇಲ್ಕಂಡ ನಾಲ್ಕು ಜನರ ಸಾಲ ಬಿಡುಗಡೆ ಮಾಡಲು ರೂ. 20,000/– ಲಂಚಕ್ಕೆ ಬೇಡಿಕೆ ಇಟ್ಟ ಬಗ್ಗೆ ಬರೆದುಕೊಂಡಿದ್ದು, ಸದರಿ ದೂರು ಯಾದಗಿರಿ ಎಸಿಬಿ ಪೋಲಿಸ್ ಠಾಣಾ ಗುನ್ನಾ ನಂ. 08/2018 ರಲ್ಲಿ ದಾಖಲಾಗಿದ್ದು,

ತನಿಖಾಧಿಕಾರಿಗಳು ತನಿಖೆಯನ್ನು ಪೂರೈಸಿ ಭ್ರಷ್ಟಾಚಾರ ಪ್ರತಿಬಂಧಕ ಕಾಯ್ದೆ ಕಲಂ 7(ಎ) ಅಡಿಯಲ್ಲಿ ದೋಷಾರೋಪಣ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ. ದೋಷರೋಪಣ ಪಟ್ಟಿಯನ್ನು ಪರಿಶೀಲಿಸಲಾಗಿ ಎದುರುದಾರರಾದ ನೀವು ಸರ್ಕಾರಿ ನೌಕರರಾಗಿ ಕರ್ತವ್ಯ ನಿರ್ವಹಿಸುವ ಕಾಲಕ್ಕೆ ರೂ. 20,000/- ಲಂಚ ಪಡೆದು ರೆಡ್ ಹ್ಯಾಂಡ್ ಆಗಿ ಸಿಕ್ಕಿ ದುರ್ನಡತೆ ತೋರಿರುವುದು ಮೇಲ್ನೋಟಕ್ಕೆ ಕಂಡುಬಂದಿದ್ದರಿಂದ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ಕಲಂ 7(2) ರನ್ವಯ ಗೌರವಾನ್ವಿತ ಉಪಲೋಕಾಯುಕ್ತರು-02 ಇವರು ಸ್ವಯಂಪ್ರೇರಿತ ದೂರು ದಾಖಲಿಸಿಕೊಂಡು ತನಿಖೆ ಕೈಗೊಂಡಿರುತ್ತಾರೆ.

2. **ಎದುರುದಾರರ ಮೇಲಿನ ಆಪಾದನೆಯ ಸಂಕ್ಷಿಪ್ತ ಸಾರಾಂಶ:**

i. ದೂರುದಾರರಾದ **ಶ್ರೀ ಲಕ್ಷ್ಮಣ ಬಿನ್ ಬಸಪ್ಪ ಕಟ್ಟಿಮನಿ, ಸಾ॥ ದೇವರಗೋನಾಳ, ತಾ॥ ಸುರಪುರ ಜಿ॥ ಯಾದಗಿರಿ** ಇವರು ದೂರು ಸಲ್ಲಿಸಿದ್ದು, ಸದರಿ ದೂರಿನಲ್ಲಿ ಬರೆದುಕೊಂಡ ಅಂಶವೇನೆಂದರೆ, ಮಹಿಳಾ ಸಮೃದ್ಧಿ ಯೋಜನೆ ಅಡಿ 120 ಮಹಿಳಾ ಫಲಾನುಭವಿಗಳಿಗೆ ಪ್ರತಿಯೊಬ್ಬರಿಗೆ ರೂ. 25,000/- ಸಾಲ ಮಂಜೂರಾಗಿದ್ದು, ಈಗಾಗಲೇ 93 ಫಲಾನುಭವಿಗಳ ಸಾಲದ ಹಣ ಬಿಡುಗಡೆಯಾಗಿದ್ದು, 27 ಜನ ಫಲಾನುಭವಿಗಳಿಗೆ ಸಾಲ ಬಿಡುಗಡೆ ಮಾಡುವುದು ಬಾಕಿಯಿದ್ದು, ದೂರುದಾರರ ಜಾತಿಯವರಾದ ಅಯ್ಯಮ್ಮ, ರೇಣುಕಾ, ಬಸಮ್ಮ ಹಾಗೂ ಜ್ಯೋತಿ ಇವರುಗಳು ದೂರುದಾರರಿಗೆ ಸಾಲ ಬಿಡುಗಡೆ ಮಾಡಿಸಿಕೊಡಲು ವಿನಂತಿಸಿದ್ದರ ಮೇರೆಗೆ, ದೂರುದಾರರು ಎದುರುದಾರರನ್ನು ಭೇಟಿ ಮಾಡಿ, ಸಾಲ ಬಿಡುಗಡೆಗೆ ವಿನಂತಿಸಲಾಗಿ, ಎದುರುದಾರರು ಪ್ರತಿಯೊಬ್ಬರಿಗೆ ರೂ. 5,000/- ದಂತೆ ಮೇಲ್ಕಂಡ ನಾಲ್ಕು ಜನರ ಸಾಲ ಬಿಡುಗಡೆ ಮಾಡಲು ರೂ. 20,000/- ಲಂಚಕ್ಕೆ ಬೇಡಿಕೆ ಇಟ್ಟಿರುತ್ತಾರೆ. ಪ್ರಸ್ತುತ ದೂರು ಸಲ್ಲಿಸುವದಕ್ಕಿಂತ 15/20 ದಿನಗಳ ಮುಂಚೆ, 2 ಬಾರಿ ಎದುರುದಾರರಿಗೆ ಫೋನ್ ಮಾಡಿದಾಗ ಎದುರುದಾರರು "ಹಳೆದು.. ಹೊಸದು ಕೂಡಿಕೊಂಡು ತೋಂಬಾ ಮತ್ತು ಏಳೇ ಸಾವಿರ ಕೊಟ್ಟು ಬಿಟ್ಟಿರಲ್ಲ. ಟಿ.ಡಿ.ಓ. ದು ಕೊಡಲಿಲ್ಲ" ಎಂಬ ಸಂಭಾಷಣೆಯನ್ನು ಹಾಗೂ ದಿ: 28/12/2018 ರಂದು ಎದುರುದಾರರು ಲಂಚಕ್ಕೆ ಬೇಡಿಕೆ ಇಟ್ಟಿರುವುದನ್ನು ದೂರುದಾರರು ತಮ್ಮ ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಿಕೊಂಡಿರುತ್ತಾರೆ.

ii) ಮೇಲ್ಕಂಡ ನಾಲ್ಕು ಜನರಿಗೆ ಲಂಚ ನೀಡಲು ಮನಸ್ಸಿಲ್ಲವಾದ್ದರಿಂದ ಸದರಿಯವರು ದೂರುದಾರರಿಗೆ ದೂರು ಸಲ್ಲಿಸಲು ತಿಳಿಸಿದ್ದು, ಅದರಂತೆ ದಿ: 28/12/2018 ರಂದು ಯಾದಗಿರಿ ಎಸಿಬಿ ಪೋಲಿಸ್ ಠಾಣೆಗೆ ಹೋಗಿ ದೂರು ಸಲ್ಲಿಸಿದ್ದು, ಸದರಿ ದೂರು ಠಾಣಾ ಗುನ್ನಾ ನಂ.8/2018 ರಲ್ಲಿ, ಭ್ರಷ್ಟಾಚಾರ ನಿಗ್ರಹ ಕಾಯ್ದೆ ಕಲಂ 7(ಎ) ಅಡಿಯಲ್ಲಿ ಪ್ರಕರಣವು ದಾಖಲಾಗಿರುತ್ತದೆ. ಪ್ರಕರಣವು ದಾಖಲಾದ ನಂತರ ತನಿಖಾಧಿಕಾರಿಗಳು ಸರ್ಕಾರಿ ಪಂಚರುಗಳಾದ 1) ರಾಜಶೇಖರ್ (ನೆರಳುಸಾಕ್ಷಿ), 2) ಗಣಪತ್‌ರಾವ ಇವರುಗಳನ್ನು

ಬರಮಾಡಿಕೊಂಡಿದ್ದು, ಸದರಿಯವರುಗಳ ಸಮಕ್ಷಮ ದೂರುದಾರರು ಮೊಬೈಲ್‌ನಲ್ಲಿದ್ದ ಮೆಮೋರಿ ಕಾರ್ಡ್‌ನ್ನು ಹಾಜರುಪಡಿಸಿದ್ದು, ಅದರಲ್ಲಿದ್ದ ಸಂಭಾಷಣೆಯನ್ನು ಪಂಚರಿಗೆ ಕೇಳಿಸಿ, ಸದರಿ ಸಂಭಾಷಣೆಯನ್ನು ಲಿಪಿಕರಿಸಿ ಸಿ.ಡಿಗಳಿಗೆ ವರ್ಗಾಯಿಸಿಕೊಂಡಿರುತ್ತಾರೆ. ಲಂಚ ನೀಡಲು ತಂದ ರೂ. 20,000/- (2000 X 10) ಗಳನ್ನು ದೂರುದಾರರು ತನಿಖಾಧಿಕಾರಿಗಳ ಮುಂದೆ ಹಾಜರುಪಡಿಸಿದ್ದು, ಸದರಿ ನೋಟುಗಳ ನಂಬರುಗಳನ್ನು ಪಂಚರು ಹೇಳಿದಂತೆ ಪೊಲೀಸ್ ಸಿಬ್ಬಂದಿ ಗಣಕೀಕರಿಸಿರುತ್ತಾರೆ. ಪೋಲಿಸ್ ಸಿಬ್ಬಂದಿ ನೋಟುಗಳಿಗೆ ಫಿನಾಪ್ತಲಿನ್ ಪೌಡರನ್ನು ಸವರಿ ಸದರಿ ಹಣವನ್ನು ಪಂಚಸಾಕ್ಷಿ-2 ಗಣಪತ್‌ರಾವ ಇವರ ಮೂಲಕ ದೂರುದಾರರ ಶರ್ಟ್ ಜೇಬಿನಲ್ಲಿ ಇಡಿಸಿರುತ್ತಾರೆ. ನಂತರ ಗಣಪತ್‌ರಾವ ಇವರ ಎರಡೂ ಕೈಗಳನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ತೊಳೆಯಲಾಗಿ ದ್ರಾವಣವು ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿದ್ದು, ಫಿನಾಪ್ತಲಿನ್ ಪೌಡರಿನ ಗುಣಧರ್ಮವನ್ನು ದೂರುದಾರರು ಹಾಗೂ ಪಂಚರಿಗೆ ಮನವರಿಕೆ ಮಾಡಿಕೊಟ್ಟಿರುತ್ತಾರೆ. ನೆರಳುಸಾಕ್ಷಿಯಾದ ರಾಜಶೇಖರ್ ಇವರಿಗೆ ದೂರುದಾರರೊಂದಿಗೆ ಹೋಗಿ ಲಂಚವನ್ನು ನೀಡುವ ಕಾಲಕ್ಕೆ ನಡೆಯುವ ಸಂಭಾಷಣೆ ಹಾಗೂ ವಿದ್ಯಮಾನಗಳನ್ನು ಗಮನಿಸಬೇಕು ಎಂದು ಸೂಚನೆ ನೀಡಿರುತ್ತಾರೆ. ದೂರುದಾರರಿಗೆ ಭೇಟಿಯಾದಾಗ ಕೆಲಸದ ಬಗ್ಗೆ ವಿಚಾರಿಸಬೇಕು, ನಂತರ ಲಂಚದ ಹಣವನ್ನು ಕೇಳಿದಾಗ ಮಾತ್ರ ಕೊಡುವಂತೆ ಮತ್ತು ಹಣ ಪಡೆದುಕೊಂಡ ನಂತರ ಕೈಯಿಂದ ತಲೆ ಸವರಿಕೊಳ್ಳುವ ಮೂಲಕ ಸಂಜ್ಞೆ ನೀಡಬೇಕೆಂದು ತಿಳಿಸಿರುತ್ತಾರೆ. ಹಣ ನೀಡುವ ಕಾಲಕ್ಕೆ ನಡೆಯುವ ಸಂಭಾಷಣೆಯನ್ನು ರೆಕಾರ್ಡ್ ಮಾಡಿಕೊಳ್ಳಲು ವಾಯ್ಸ್ ರೆಕಾರ್ಡ್‌ರನ್ನು ನೀಡಿರುತ್ತಾರೆ. ಈ ಎಲ್ಲಾ ಘಟನಾವಳಿಗಳನ್ನು ದಿ: 29-12-2018 ರಂದು ಮಧ್ಯಾಹ್ನ 12:00 ರಿಂದ 2:00 ಘಂಟೆಯವರೆಗೆ ಯಾದಗಿರಿ ಎಸಿಬಿ ಕಛೇರಿಯಲ್ಲಿ ಬರೆದ ಪ್ರಯೋಗಿಕ ಪಂಚನಾಮೆಯಲ್ಲಿ ದಾಖಲಿಸಿರುತ್ತಾರೆ.

iii) ಪ್ರಾಯೋಗಿಕ ಪಂಚನಾಮೆ ಮುಗಿದ ನಂತರ ದಾಳಿತಂಡದವರು ಮಧ್ಯಾಹ್ನ 3:15 ಕ್ಕೆ ಯಾದಗಿರಿ ಪಟ್ಟಣದ ಮಿನಿ ವಿಧಾನಸೌಧದ ಹತ್ತಿರ ಬಂದಿದ್ದು, ಯಾದಗಿರಿ-ಕಲಬುರಗಿ ರಸ್ತೆಯಲ್ಲಿ ವಾಹನಗಳನ್ನು ನಿಲ್ಲಿಸಿ, ದೂರುದಾರರು ಹಾಗೂ ನೆರಳುಸಾಕ್ಷಿಗೆ ಮತ್ತೋಮ್ಮೆ ಸೂಚನೆ ನೀಡಿ, ಎದುರುದಾರರು ಕೆಲಸ ಮಾಡುವ ಕಚೇರಿಯ ಒಳಗೆ ಕಳುಹಿಸಿರುತ್ತಾರೆ. ದಾಳಿತಂಡದವರು ಸದರಿಯವರನ್ನು ಹಿಂಬಾಲಿಸಿ, 2ನೇ ಬ್ಲಾಕ್‌ನಲ್ಲಿರುವ ಎದುರುದಾರರ ಛೇಂಬರ್ ಹತ್ತಿರ ಅಲ್ಲಿಲ್ಲಿ ನಿಂತುಕೊಂಡು ಸಂಜ್ಞೆಗಾಗಿ ಕಾಯುತ್ತಿರುತ್ತಾರೆ. ದೂರುದಾರರು ಕಚೇರಿಯ ಒಳಗೆ ಹೋಗಲಾಗಿ, ಎದುರುದಾರರು ಇರಲಿಲ್ಲ. ಎದುರುದಾರರಿಗೆ ಫೋನ್ ಮಾಡಲಾಗಿ, ಸ್ವಲ್ಪ ಹೊತ್ತಿನಲ್ಲಿ ಬರುವುದಾಗಿ ತಿಳಿಸಿದ್ದು, ಅದರಂತೆ ಸ್ವಲ್ಪ ಸಮಯದ ನಂತರ ಬಂದಿರುತ್ತಾರೆ. ಬಂದ ನಂತರ ಹಣವನ್ನು ಅಟೆಂಡರ್ ಸಚಿನ್ ಇವರಿಗೆ ಕೊಡಲು ತಿಳಿಸಿದ್ದು, ಅದರಂತೆ ದೂರುದಾರರು ಸಚಿನ್‌ರವರ ಕೈಗೆ ಕೊಟ್ಟಿರುತ್ತಾರೆ. ನಂತರ ಎದುರುದಾರರು ಹಣವನ್ನು ಸಚಿನ್‌ರವರಿಂದ ಬಲಗೈಯಿಂದ ಪಡೆದುಕೊಂಡು, ತನ್ನ ಟೇಬಲ್ ಡ್ರಾನಲ್ಲಿ

ಇಟ್ಟುಕೊಂಡಿರುತ್ತಾರೆ. ಹಣ ಪಡೆದುಕೊಂಡ ತಕ್ಷಣ ಅಂದರೆ ಸುಮಾರು 4:30 ಕ್ಕೆ ತನಿಖಾಧಿಕಾರಿಗಳಿಗೆ ದೂರುದಾರರು ಸಂಜ್ಞೆ ನೀಡಿರುತ್ತಾರೆ. ತಕ್ಷಣ ತನಿಖಾಧಿಕಾರಿಗಳು ಎದುರುದಾರರ ಛೇಂಬರ್‌ಗೆ ಬಂದು, ದೂರುದಾರರನ್ನು ವಿಚಾರಿಸಲಾಗಿ, ನಡೆದ ಘಟನೆಯನ್ನು ಮೇಲ್ಕಂಡಂತೆ ಹೇಳಿರುತ್ತಾರೆ. ಆ ಕಾಲಕ್ಕೆ ಎದುರುದಾರರು ನನ್ನ ಕಚೇರಿಯಲ್ಲಿ ಏನು ಮಾಡುತ್ತಿದ್ದೀರೆಂದು ಚಿರಾಡಿರುತ್ತಾರೆ. ತನಿಖಾಧಿಕಾರಿಗಳು ಎದುರುದಾರರಿಗೆ ತಮ್ಮ ಪರಿಚಯ ಮಾಡಿಕೊಂಡು, ಪ್ರಕರಣ ದಾಖಲಾದ ಬಗ್ಗೆ ತಿಳಿಸಿ, ತನಿಖೆಗೆ ಸಹಕರಿಸುವಂತೆ ಸೂಚನೆ ನೀಡಿರುತ್ತಾರೆ. ಅಷ್ಟರಲ್ಲಿ ಹಣ ಪಡೆದುಕೊಂಡ ಅಟೆಂಡರ್ ಅಲ್ಲಿಂದ ಓಡಿ ಹೋಗಿರುತ್ತಾರೆ. ಸೋಡಿಯಂ ಕಾರ್ಬೋನೆಟ್ ದ್ರಾವಣದಲ್ಲಿ ಎದುರುದಾರರ ಬಲಗೈ ಬೆರಳುಗಳನ್ನು ತೊಳೆಯಲಾಗಿ ದ್ರಾವಣವು ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ. ಅದೇ ಪ್ರಕಾರ ಸೋಡಿಯಂ ಕಾರ್ಬೋನೆಟ್ ದ್ರಾವಣದಲ್ಲಿ ಎದುರುದಾರರ ಎಡಗೈ ಬೆರಳುಗಳನ್ನು ತೊಳೆಯಲಾಗಿ ದ್ರಾವಣವು ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿರುವುದಿಲ್ಲ. ಎದುರುದಾರರಿಗೆ ಹಣವನ್ನು ಹಾಜರುಪಡಿಸಲು ಸೂಚಿಸಲಾಗಿ, ಹಣದ ಬಗ್ಗೆ ಗೊತ್ತಿಲ್ಲವೆಂದು ನುಡಿಯುತ್ತಾನೆ. ಪಂಚ-1 ರಾಜಶೇಖರ್‌ರವರು ಡ್ರಾದಲ್ಲಿರುವ ಹಣವನ್ನು ತೆಗೆದು ಈ ಮೊದಲೇ ದಾಖಲಿಸಿಕೊಂಡ ನೋಟುಗಳ ನಂಬರ್‌ಗಳೊಂದಿಗೆ ತಾಳೆ ಮಾಡಿ ನೋಡಲಾಗಿ, ತಾಳೆ ಹೊಂದಿದ ಮೇರೆಗೆ ಸದರಿ ಹಣವನ್ನು ತನಿಖಾಧಿಕಾರಿಯವರು ಅಮಾನತ್ತು ಪಡಿಸಿಕೊಂಡಿರುತ್ತಾರೆ. ಹಣವನ್ನು ಇಟ್ಟ ಭಾಗವನ್ನು ಹತ್ತಿಯಿಂದ ಒರೆಸಿ ಸೋಡಿಯಂ ಕಾರ್ಬೋನೆಟ್ ದ್ರಾವಣದಲ್ಲಿ ತೊಳೆಯಲಾಗಿ ದ್ರಾವಣವು ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ. ಎದುರುದಾರರಿಂದ 2 ಮೊಬೈಲ್‌ಗಳನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ. ದೂರುದಾರರು ಹಾಜರುಪಡಿಸಿದ ಮೆಮೋರಿ ಕಾರ್ಡ್‌ನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ. ಲಂಚ ಬೇಡಿಕೆಗೆ ಸಂಬಂಧಿಸಿದ ಹಾಗೂ ಲಂಚ ನೀಡುವ ಕಾಲಕ್ಕೆ ನಡೆದ ಸಂಭಾಷಣೆಯನ್ನು ಲಿಪಿಕರಿಸಿಕೊಂಡು ಸಿ.ಡಿ.ಗೆ ವರ್ಗಾಯಿಸಿಕೊಂಡಿರುತ್ತಾರೆ. ಎದುರುದಾರರಿಗೆ ರಕ್ಷಣಾ ಹೇಳಿಕೆಯನ್ನು ಬರೆದುಕೊಡಲು ತಿಳಿಸಿದ್ದು, ಅದಕ್ಕೆ ಎದುರುದಾರರು ಬರೆದುಕೊಟ್ಟಿದ್ದೇನೆಂದರೆ, ತಾನು ಹಣವನ್ನು ಸ್ವೀಕರಿಸಿರುವುದಿಲ್ಲ. ಯಾವುದೇ ಸಾಕ್ಷ್ಯಾಧಾರಗಳಿಲ್ಲದೆ ವಶಕ್ಕೆ ಪಡೆದು, ವಿಚಾರಣೆ ಮಾಡುತ್ತಿದ್ದೀರಿ ಎಂದು ತನ್ನ ಸಮಜಾಯಿಷಿಯಲ್ಲಿ ಬರೆದುಕೊಟ್ಟಿರುತ್ತಾರೆ. ಸದರಿ ಸಮಜಾಯಿಷಿಯನ್ನು ದೂರುದಾರರ ಹಾಗೂ ನೆರಳುಸಾಕ್ಷಿ ಒಪ್ಪಿರುವುದಿಲ್ಲ. ಲಂಚ ಬೇಡಿಕೆಗೆ ಸಂಬಂಧಿಸಿದ ಸಂಭಾಷಣೆಯನ್ನು ಹೊರಗುತ್ತಿಗೆ ಆಧಾರದ ಮೇಲೆ ಎಫ್.ಡಿ.ಎ. ಆಗಿ ಕೆಲಸ ಮಾಡುತ್ತಿರುವ ಜಯಪ್ರಕಾಶ್ ಇವರಿಗೆ ಕೇಳಿಸಲಾಗಿ ಸದರಿಯವರು ಅದರಲ್ಲಿದ್ದ ಒಂದು ಧ್ವನಿಯು ಎದುರುದಾರರದೆಂದು ಗುರ್ತಿಸಿರುತ್ತಾರೆ. ಈ ಎಲ್ಲಾ ಪ್ರಕ್ರಿಯೆಗಳನ್ನು ತನಿಖಾಧಿಕಾರಿಗಳು ದಿ: 29/12/2018 ರಂದು ಸಂಜೆ 4:45 ಗಂಟೆಯಿಂದ ರಾತ್ರಿ 9:30 ವರೆಗೆ ಗಂಟೆಯವರೆಗೆ ಯಾದಗಿರಿ ಮಿನಿ ವಿಧಾನಸೌಧದ 2ನೇ ಮಹಡಿಯಲ್ಲಿರುವ ಎದುರುದಾರರ ಕೊಠಡಿಯಲ್ಲಿ (ಸಿ-9) ಬರೆದ ಟ್ರ್ಯಾಪ್ ಮಹಜರ್‌ನಲ್ಲಿ ದಾಖಲಿಸಿರುತ್ತಾರೆ.

ದಿ: 05/02/2019 ರಂದು ಸಚಿನ್ ಹಾಗೂ ದೂರುದಾರರ ಮಾದರಿ ಧ್ವನಿಯನ್ನು ಸ್ಕ್ರಿಪ್ಟ್‌ನಲ್ಲಿ ಬರೆದಂತೆ 3 ಬಾರಿ ಓದಿಸುವ ಮೂಲಕ ಪಡೆದುಕೊಂಡಿರುತ್ತಾರೆ.

ದಿ: 27/03/2019 ರಂದು ಎದುರುದಾರರ ಮಾದರಿ ಧ್ವನಿಯನ್ನು ಸ್ಕ್ರಿಪ್ಟ್‌ನಲ್ಲಿ ಬರೆದಂತೆ 3 ಬಾರಿ ಓದಿಸುವ ಮೂಲಕ ಪಡೆದುಕೊಂಡಿರುತ್ತಾರೆ.

iv) ತನಿಖಾ ಕಾಲದಲ್ಲಿ ಎದರುದಾರರ ಬಲಗೈ ಬೆರಳುಗಳನ್ನು ತೊಳೆದ ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಫಿನಾಪ್ತಲಿನ್ ಅಂಶ ಪತ್ತೆ ಆಗಿರುವುದು ತಜ್ಞರ ವರದಿಯಿಂದ ಕಂಡುಬರುತ್ತದೆ. ಎದುರುದಾರರು ದೂರುದಾರರೊಂದಿಗೆ ಮಾತನಾಡಿದ ಸಂಭಾಷಣೆಯಲ್ಲಿಯ ಒಂದು ಧ್ವನಿಯು ಎದುರುದಾರರ ಎಂದು ಅವರ ಕಚೇರಿಯಲ್ಲಿ ಕೆಲಸ ಮಾಡುವ ಎಫ್.ಡಿ.ಎ. ಜಯಪ್ರಕಾಶ್ ಇವರು ಗುರ್ತಿಸಿರುತ್ತಾರೆ.

v) ತನಿಖಾಧಿಕಾರಿಗಳು ಪ್ರಕರಣಕ್ಕೆ ಸಂಬಂಧಿಸಿದ ಪ್ರಮುಖ ಘಟನಾವಳಿಗಳನ್ನು ಚಿತ್ರೀಕರಿಸಿರುತ್ತಾರೆ. ಎದುರುದಾರರನ್ನು ಅಂದೇ ದಸ್ತಗಿರಿ ಮಾಡಿ ನ್ಯಾಯಾಲಯಕ್ಕೆ ಹಾಜರಪಡಿಸಿರುತ್ತಾರೆ. ಎದುರುದಾರರ ಸಂಭಾಷಣೆಯನ್ನು ಆರ್ಟಿಕಲ್ ನಂ: 13 & 14 ರಲ್ಲಿ ಸಂಗ್ರಹಿಸಿದ್ದು, ಸದರಿ ಧ್ವನಿಯು, ಸದರಿಯವರ ಮಾದರಿ ಧ್ವನಿಯೊಂದಿಗೆ ತಾಳೆಯಾಗುತ್ತದೆ ಎಂದು ತಜ್ಞರು ಅಭಿಪ್ರಾಯಪಟ್ಟಿರುತ್ತಾರೆ.

3. ಎದುರುದಾರರು ಪರಿವೀಕ್ಷಣಾ ಟಿಪ್ಪಣಿಗೆ ತಮ್ಮ ಸಮಾಜಾಯಿಷಿಯನ್ನು ಸಲ್ಲಿಸಿರುತ್ತಾರೆ. ಸಮಜಾಯಿಷಿಯನ್ನು ಪರಿಶೀಲಿಸಲಾಗಿ ಎದುರುದಾರರು ಪರಿವೀಕ್ಷಣಾ ಟಿಪ್ಪಣಿಯಲ್ಲಿ ಮಾಡಿದ ಎಲ್ಲಾ ಆಪಾದನೆಗಳನ್ನು ಸಂಪೂರ್ಣವಾಗಿ ಅಲ್ಲಗಳೆದಿರುತ್ತಾರೆ. ಮುಂದುವರೆದು ದೂರುದಾರರಿಗೆ ಸಂಬಂಧಿಸಿದ ಕೆಲಸವು ತನ್ನ ಹತ್ತಿರ ಬಾಕಿ ಇರುವುದಿಲ್ಲ. ದೂರುದಾರರಿಗೂ ಹಾಗೂ ತನಗೂ ಯಾವುದೇ ರೀತಿ ಸಂಬಂಧವಿರುವುದಿಲ್ಲ. ತಾನು ಯಾವುದೇ ಲಂಚದ ಹಣಕ್ಕೆ ಬೇಡಿಕೆ ಇಟ್ಟಿಲ್ಲ. ದೂರುದಾರರು 3ನೇ ವ್ಯಕ್ತಿಯಾಗಿದ್ದು ಅವರಿಂದ ಹಣ ಪಡೆದುಕೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ. ಯಾದಗಿರಿ ಜಿಲ್ಲಾ ಹಾಗೂ ಸತ್ರ ನ್ಯಾಯಾಲಯದಲ್ಲಿ ಸಾಕ್ಷಿಗಳ ವಿಚಾರಣೆ ಇನ್ನೂ ನಡೆಯಬೇಕಾಗಿದ್ದು, ಆ ಕಾರಣದಿಂದ ಇಲಾಖಾ ವಿಚಾರಣೆ ನಡೆಸಲು ಶಿಫಾರಸ್ಸು ಮಾಡಬಾರದೆಂದು ವಿನಂತಿಸಿಕೊಂಡಿರುತ್ತಾರೆ.

4. ತನಿಖಾಧಿಕಾರಿ ತನಿಖಾ ಕಾಲದಲ್ಲಿ ಸಂಗ್ರಹಿಸಿದ ಸಾಕ್ಷ್ಯಾಧಾರಗಳನ್ನು ನಂಬದಿರಲು ಹಾಗೂ ಎದುರುದಾರರು ತಮ್ಮ ಸಮಜಾಯಿಷಿಯಲ್ಲಿ ನಿವೇದಿಸಿಕೊಂಡ ನಿಲುವುಗಳನ್ನು ನಂಬಲು ಈ ಹಂತದಲ್ಲಿ ಯಾವುದೇ ಸಮಂಜಸವಾದ ಆಧಾರಗಳು ಕಂಡುಬರುವುದಿಲ್ಲ. ಲಂಚ ಬೇಡಿಕೆಯ ಸಂಭಾಷಣೆಯಲ್ಲಿಯ ಪ್ರಶ್ನಿತ ಎದುರುದಾರರ ಧ್ವನಿಯು, ತನಿಖಾಧಿಕಾರಿ ಸಂಗ್ರಹಿಸಿದ ಎದುರುದಾರರ ಮಾದರಿ ಧ್ವನಿಯೊಂದಿಗೆ ತಾಳೆಯಾಗುತ್ತದೆ ಎಂದು ತಜ್ಞರು ಅಭಿಪ್ರಾಯಪಟ್ಟಿರುತ್ತಾರೆ. ಅಲ್ಲದೆ ಕಚೇರಿಯಲ್ಲಿ ಎಫ್.ಡಿ.ಎ. ಆಗಿ ಕೆಲಸ ಮಾಡುತ್ತಿದ್ದ ಜಯಪ್ರಕಾಶ್ ರವರು ಸಂಭಾಷಣೆಯಲ್ಲಿಯ ಒಂದು ಧ್ವನಿಯು ಎದುರುದಾರರದೆಂದು

ಗುರುತಿಸಿರುತ್ತಾರೆ. ಪ್ರಕರಣದ ಸತ್ಯಾಸತ್ಯತೆಯನ್ನು ಕಂಡುಕೊಳ್ಳಲು ಇಲಾಖಾ ವಿಚಾರಣೆ ನಡೆಸುವುದು ಅತಿ ಅವಶ್ಯವಿರುತ್ತದೆ. ಈ ಕಾರಣಗಳಿಂದ ಎದುರುದಾರರ ಸಮಜಾಯಿಷಿಯನ್ನು ಒಪ್ಪಿಕೊಳ್ಳಲು ಕಾನೂನಿನಲ್ಲಿ ಅವಕಾಶವಿರುವುದಿಲ್ಲ.

5. ತನಿಖಾ ಕಾಲದಲ್ಲಿ ಸಂಗ್ರಹಿಸಿದ ದಾಖಲೆಗಳನ್ನು ಹಾಗೂ ಸಾಕ್ಷ್ಯಾಧಾರಗಳನ್ನು ಪರಿಶೀಲಿಸಲಾಗಿ ನೀವು ನಿಮ್ಮ ಕರ್ತವ್ಯದಲ್ಲಿ ಸಂಪೂರ್ಣ ನೀತಿ, ನಿಷ್ಠೆ ಹಾಗೂ ಶ್ರದ್ದೆಯನ್ನು ಹೊಂದಿರದೇ, ಸರ್ಕಾರಿ ನೌಕರನಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು, ಭ್ರಷ್ಟಾಚಾರವೆಸಗಿ, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966 ನಿಯಮ 3(1)(i) ರಿಂದ (iv) ನ್ನು ಉಲ್ಲಂಘಿಸಿ, ದುರ್ನಡತೆ ಎಸಗಿರುವುದರಿಂದ ಎದುರುದಾರರು ಇಲಾಖಾ ವಿಚಾರಣೆ ಒಳಪಡಲು ಬಾಧ್ಯರಾಗಿರುತ್ತಾರೆ.

6. ಆದ್ದರಿಂದ ಎದುರುದಾರರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು, ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿರ್ಭಂಧ ಮತ್ತು ಮೇಲ್ಮನವಿ) ನಿಯಮಗಳು 1957, ನಿಯಮ 14(ಎ) ಅಡಿಯಲ್ಲಿ ಅನುಮತಿಸಿ, ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3) ರಲ್ಲಿ ಪ್ರದತ್ತವಾದ ಅಧಿಕಾರದ ಅಡಿ ಸಕ್ಷಮ ಪ್ರಾಧಿಕಾರವಾದ ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(4) ಪ್ರಕಾರ ಶಿಸ್ತು ಪ್ರಾಧಿಕಾರವು ಈ ವರದಿಯ ಅನ್ವಯ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಿರುವ ಕ್ರಮದ ಬಗ್ಗೆ ಈ ವರದಿ ತಲುಪಿದ ದಿನಾಂಕದಿಂದ ಮೂರು (3) ತಿಂಗಳ ಒಳಗಾಗಿ ಈ ಪ್ರಾಧಿಕಾರಕ್ಕೆ ತಿಳಿಸುವುದು.

K.N. Phanindra .. 17/05/22

**(ನ್ಯಾಯಮೂರ್ತಿ ಕೆ.ಎನ್ ಫಣೀಂದ್ರ)**
**ಉಪಲೋಕಾಯುಕ್ತರು-2**
**ಕರ್ನಾಟಕ ರಾಜ್ಯ, ಬೆಂಗಳೂರು.**